# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕ.

ಕವಿಪ್ರನಿನಿ/ಬಿ. 93 / 2014-15

ನಿಗಮ ಕಾರ್ಯಾಲಯ, ಕಾವೇರಿ ಭವನ,
ಬೆಂಗಳೂರು. ದಿನಾಂಕ: 9-03-2016.

1. ಆರ್ಥಿಕ ಸಲಹೆಗಾರರು(ಲೆ & ಸಂ)
ಕವಿಪ್ರನಿನಿ, ನಿಗಮ ಕಾರ್ಯಾಲಯ
ಕಾವೇರಿ ಭವನ, ಬೆಂಗಳೂರು.
2. ಮುಖ್ಯ ಪ್ರಧಾನ ವ್ಯವಸ್ಥಾಪಕರು,
ಬೆವಿಕಂ, ನಿಗಮ ಕಾರ್ಯಾಲಯ
ಬೆಂಗಳೂರು.
3. ಮುಖ್ಯ ಆರ್ಥಿಕ ಅಧಿಕಾರಿ
ಚಾವಿಸನಿನಿ, ನಿಗಮ ಕಾರ್ಯಾಲಯ
ಮೈಸೂರು.
4. ಆರ್ಥಿಕ ಸಲಹೆಗಾರರು
ಗುವಿಸಕಂ, ನಿಗಮ ಕಾರ್ಯಾಲಯ
ಕಲಬುರಗಿ.
5. ಆರ್ಥಿಕ ಸಲಹೆಗಾರರು
ಹುವಿಸಕಂ, ನಿಗಮ ಕಾರ್ಯಾಲಯ
ಹುಬ್ಬಳ್ಳಿ.
6. ಆರ್ಥಿಕ ಸಲಹೆಗಾರರು
ಮವಿಸಕಂ, ನಿಗಮ ಕಾರ್ಯಾಲಯ
ಮಂಗಳೂರು

ಮಾನ್ಯರೆ,

ವಿಷಯ: ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ವ್ಯಾಪ್ತಿಗೆ ಬರುವ ನಿಗಮದ ನೌಕರರು ಸೇವೆಯಲ್ಲಿರುವಾಗಲೇ ಮೃತರಾದ ಸಂದರ್ಭದಲ್ಲಿ ಅವರ ಕುಟುಂಬದ ವಾರಸುದಾರರಿಗೆ ನೀಡಬಹುದಾದ ಇಡಿಗಂಟಿನ ಪರಿಹಾರದ ಬಗ್ಗೆ.

ಉಲ್ಲೇಖ: ೧. ನಿಗಮ ಕಛೇರಿ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ. 16/ 4977/ 2005-06 / ದಿನಾಂಕ: 24-09-2012.
೨. ನಿಗಮ ಕಛೇರಿ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ. 16/ಬಿ. 14/4977/2005-06 / ದಿನಾಂಕ 07-11-2014

*******

ಉಲ್ಲೇಖ ೨ ರಲ್ಲಿರುವ ನಿಗಮ ಕಛೇರಿ ಪತ್ರದಲ್ಲಿ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ವ್ಯಾಪ್ತಿಗೆ ಬರುವ ನಿಗಮದ ನೌಕರರು ಸೇವೆಯಲ್ಲಿರುವಾಗಲೇ ಮೃತರಾದ ಸಂದರ್ಭದಲ್ಲಿ ಅವರ ಕುಟುಂಬದ ವಾರಸುದಾರರಿಗೆ ನೀಡಬಹುದಾದ ಇಡಿಗಂಟಿನ ಪರಿಹಾರದ ಬಗ್ಗೆ ವಿವಿಧ ಶ್ರೇಣಿಯ ಅಧಿಕಾರಿ / ನೌಕರರಿಗೆ ಮಂಜೂರಾತಿ ಪ್ರಾಧಿಕಾರ ಮತ್ತು ಅಧೀಕರಿಸುವ ಪ್ರಾಧಿಕಾರವನ್ನು ನಿಗಧಿಗೊಳಿಸಲಾಗಿರುತ್ತದೆ. ಇದೇ ಪತ್ರದ ಕಂಡಿಕೆ ೩ ರಲ್ಲಿ ಈ ಕೆಳಗಿನಂತೆ ಸೂಚಿಸಲಾಗಿರುತ್ತದೆ.

*"ಮೇಲಿನ ಎಲ್ಲಾ ಸಂದರ್ಭಗಳಲ್ಲಿ ಮೃತಪಟ್ಟ ಅಧಿಕಾರಿ/ ನೌಕರರ ಕುಟುಂಬದ ವಾರಸುದಾರರಿಗೆ ಇಡಿಗಂಟಿನ ಪರಿಹಾರ ಮಂಜೂರಾತಿ ಮತ್ತು ಅಧೀಕರಿಸುವ ಮುನ್ನ ಪಿಂಚಣಿ ಮತ್ತು ಉಪದಾನ ಟ್ರಸ್ಟ್ ನ ಕೆಇಎನ್‌ಡಿಸಿಪಿಎಸ್ ಘಟಕದಿಂದ ಪಿಂಚಣಿ ವಂತಿಗೆ ಸಂದಾಯದ ಬಗ್ಗೆ ದಾಖಲೆಗಳನ್ನು ಪರಿಶೀಲನೆಗೆ ಒಳಪಡಿಸಿದ / ದೃಢೀಕರಿಸಿದ ನಂತರವೇ ಮುಂದಿನ ಕ್ರಮ ಕೈಗೊಳ್ಳಬೇಕಿರುತ್ತದೆ."*

ಮೇಲ್ಕಂಡ ಸೂಚನೆಯನ್ವಯ ಕವಿಪ್ರನಿನಿ ಮತ್ತು ಎಸ್ಕಾಂಗಳಿಂದ ಕೆಇಎನ್‌ಡಿಸಿಪಿಎಸ್ ಘಟಕದಲ್ಲಿ ಪರಿಶೀಲನೆಗಾಗಿ ಕಡತಗಳನ್ನು ಸ್ವೀಕರಿಸಲಾಗುತ್ತಿದ್ದು ಈ ನಿಟ್ಟಿನಲ್ಲಿ ಎಲ್ಲಾ ಕಂಪನಿಗಳೂ ಸಮಾನ ಪದ್ಧತಿಯನ್ನು ಅನುಸರಿಸದೇ ಇರುವುದನ್ನು ಗಮನಿಸಲಾಗಿದೆ. ಕೆಲವು ಕಂಪನಿಗಳ ನಿಗಮ ಕಛೇರಿಗಳು ಕಡತವನ್ನು ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಕಳುಹಿಸುತ್ತಿದ್ದರೆ ಮತ್ತೆ ಕೆಲವು ಕಂಪನಿಗಳ ಲೆಕ್ಕ ಘಟಕಗಳು ಕಡತವನ್ನು ನೇರವಾಗಿ ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಕಳುಹಿಸುತ್ತಿವೆ. ಆದ್ದರಿಂದ ಕಡತ ಪರಿಶೀಲನೆಯ ಒಂದು ಹಂತವನ್ನು ಉಲ್ಲಂಘಿಸಿದಂತಾಗಿ ಅನಗತ್ಯ ಪತ್ರ ವ್ಯವಹಾರಕ್ಕೆ ಕಾರಣವಾಗುತ್ತಿದೆ. ಇದರಿಂದ ವಾರಸುದಾರರಿಗೆ ಇಡಿಗಂಟಿನ ಪರಿಹಾರದ ಮಂಜೂರಾತಿಯಲ್ಲಿ ವಿಳಂಬವಾಗುತ್ತಿದೆ. ಇದನ್ನು ನಿವಾರಿಸುವ ದೃಷ್ಟಿಯಿಂದ ಪ್ರಸ್ತಾವನೆಯನ್ನು ಅಧೀಕರಿಸುವ ಪ್ರಾಧಿಕಾರವಾದ ಆಯಾ ಕಂಪನಿಯ ಅರ್ಥಿಕ ಸಲಹೆಗಾರರ ಮೂಲಕವೇ ಕಡತವನ್ನು ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಕಳುಹಿಸುವುದು ಸೂಕ್ತವಾಗಿರುತ್ತದೆ.

ಈ ಮೇಲಿನ ಹಿನ್ನಲೆಯಲ್ಲಿ, ಇನ್ನು ಮುಂದೆ ಇಡಿಗಂಟು ಪರಿಹಾರದ ಕಡತವನ್ನು ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಕಳುಹಿಸುವಾಗ ಸಂಬಂಧಿಸಿದ ಕಂಪನಿಯ ನಿಗಮ ಕಛೇರಿಯ ಮೂಲಕವೇ ಕಳುಹಿಸಬೇಕೆಂದು ಸೂಚಿಸಲಾಗಿದೆ. ಲೆಕ್ಕ ಘಟಕಗಳಿಂದ ನೇರವಾಗಿ ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಕಳುಹಿಸಲ್ಪಟ್ಟ ಇಡಿಗಂಟು ಪರಿಹಾರದ ಕಡತವನ್ನು ಇನ್ನು ಮುಂದೆ ಯಾವುದೇ ಕ್ರಮ ವಹಿಸದೇ ಹಿಂದಿರುಗಿಸಲಾಗುವುದು. ಈ ನಿಟ್ಟಿನಲ್ಲಿ ಆಗುವ ವಿಳಂಬಕ್ಕೆ ಸಂಬಂಧಿಸಿದ ಲೆಕ್ಕ ಘಟಕಗಳನ್ನೇ ಹೊಣೆ ಮಾಡಲಾಗುವುದು.

ತಮ್ಮ ವಿಶ್ವಾಸಿ

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)

ಪ್ರತಿಗಳು:-

೧. ಆರ್ಥಿಕ ಸಲಹೆಗಾರರು (ಪಿ ಮತ್ತು ಉ ಟ್ರಸ್ಟ್) ಕವಿಪ್ರನಿನಿ, ಬೆಂಗಳೂರು ರವರಿಗೆ ಮಾಹಿತಿಗಾಗಿ.
೨. ನಿಯಂತ್ರಣಾಧಿಕಾರಿ (ಪಿ ಮತ್ತು ಉ ಟ್ರಸ್ಟ್) ಕವಿಪ್ರನಿನಿ, ಬೆಂಗಳೂರು ರವರಿಗೆ ಮಾಹಿತಿಗಾಗಿ.
೩. ಅಧೀಕ್ಷಕ ಅಭಿಯಂತರರು (ಐ ಟಿ ಮತ್ತು ಎಂ ಐ ಸ್) ರವರಿಗೆ ಮಾಹಿತಿಗಾಗಿ. ಸದರಿ ಪತ್ರವನ್ನು ಕವಿಪ್ರನಿನಿ ವೆಬ್ ಸೈಟ್ ನಲ್ಲಿ ಪ್ರಕಟಿಸಲು ವ್ಯವಸ್ಥೆ ಮಾಡಲು ಕೋರಿದೆ.
೪. ಉಪ ನಿಯಂತ್ರಣಾಧಿಕಾರಿ (ಕೆಇಎನ್‌ಡಿಸಿಪಿಎಸ್ ಘಟಕ) ಕವಿಪ್ರನಿನಿ, ಬೆಂಗಳೂರು ರವರಿಗೆ ಮಾಹಿತಿಗಾಗಿ.
5. ಲೆಕ್ಕಾಧಿಕಾರಿಗಳು / ಎಲ್ಲಾ ವಿಷಯ ನಿರ್ವಾಹಕರು ,ಕೆಇಎನ್‌ಡಿಸಿಪಿಎಸ್ ಘಟಕ, ಕವಿಪ್ರನಿನಿ, ಬೆಂಗಳೂರು ರವರಿಗೆ ಸೂಕ್ತ ಕ್ರಮಕ್ಕಾಗಿ.